ಪುಸ್ತಕಗಳನ್ನು ಓದಿದರೆ ಒಂದು ವಿಷಯದಲ್ಲಿ, ಒಂದು ಮಾರ್ಗದಲ್ಲಿ ಶ್ರದ್ಧೆಯನ್ನು ಬೆಳೆಸಿಕೊಳ್ಳುವುದು ಕಷ್ಟವಾಗುತ್ತದೆ.

ಇನ್ನೊಂದು ಬಗೆಯ ಬುದ್ಧಿಭೇದವಿದೆ. ಇಂದಿನ ಮಾಧ್ಯಮಗಳಿಗೆ ಸೇರಿದ ಬೇಜವಾಬ್ದಾರಿಯ ವ್ಯಕ್ತಿಗಳು ಕೆಟ್ಟ ವಿಷಯಗಳನ್ನೇ ವರ್ಣರಂಜಿತವಾಗಿ ಪ್ರಕಟಿಸುವುದರ ಮೂಲಕ, ಜನರಲ್ಲಿ ಒಂದು ರೀತಿಯ ಸಿನಿಕತನವನ್ನೂ, ನಿರಾಶಾಭಾವನೆಯನ್ನೂ ಉಂಟುಮಾಡುತ್ತಾರೆ. ಅನೇಕ ವೇಳೆ ಜನರಲ್ಲಿ ಅನವಶ್ಯಕ ಭಯವನ್ನು ಉಂಟುಮಾಡುತ್ತಾರೆ. ಸಮಾಜದಲ್ಲಿ ಅಶಾಂತಿಗೂ ಘರ್ಷಣೆಗಳಿಗೂ ಕಾರಣರಾಗುತ್ತಾರೆ.

ಬುದ್ಧಿಭೇದವನ್ನು ಉಂಟುಮಾಡಬಾರದು ಎಂಬುದನ್ನೇ ಆಧಾರವಾಗಿಟ್ಟುಕೊಂಡು, ಅಧಿಕಾರವಾದದ ದುರ್ಬಳಕೆಯನ್ನು ಮಾಡುವ ಅನೇಕ ಪಂಡಿತವರೇಣ್ಯರಿದ್ದಾರೆ. ಯೋಗ್ಯ ಅಧಿಕಾರಿಗಳಿಗೆ ಮಾತ್ರ ಉನ್ನತ ವೇದಾಂತದ ಚಿಂತನೆಗಳನ್ನು ಹೇಳಬೇಕೇ ಹೊರತು, ಅನಧಿಕಾರಿಗಳಿಗೆ ಈ ವಿಷಯಗಳನ್ನು ತಿಳಿಸಬಾರದು ಎಂದು ಅವರು ವಾದಿಸುತ್ತಾರೆ. ಈ ರೀತಿ ಸಮಾಜದ ಒಂದು ವರ್ಗದವರಿಗೆ ಉನ್ನತ ಆಧ್ಯಾತ್ಮಿಕ ಭಾವನೆಗಳಾಗಲೀ, ಸಂಸ್ಕೃತಿಯಾಗಲೀ ತಲುಪದಂತೆ ಅವರನ್ನು ಧರ್ಮದ ಹೊರವಲಯದಲ್ಲೇ ಇಟ್ಟಿರುವರು. ತಾವು ಮಾತ್ರ ಅದಕ್ಕೆ ಅಧಿಕಾರಿಗಳು ಎಂದು ಬೀಗುತ್ತ, ವೇದಾಂತದ ಮುತ್ತುರತ್ನಗಳನ್ನು ಜನಸಾಮಾನ್ಯರಿಗೆ ಹಂಚದೆ, ಅವರನ್ನು ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿರಿಸಿದರು.

ಸ್ವಾಮಿ ವಿವೇಕಾನಂದರು ಇಂತಹ ಅಧಿಕಾರವಾದವನ್ನು ಖಂಡಿಸುತ್ತಾರೆ: “ನಾನು ಪೂರ್ವಕಾಲದ ಋಷಿಗಳಿಗೆ ಎಷ್ಟೇ ಗೌರವ ತೋರಿದರೂ, ಅವರು ಜನರಿಗೆ ಬೋಧಿಸಿದ ರೀತಿಯನ್ನು ಖಂಡಿಸದೇ ಇರಲಾರೆ. ಯಾವಾಗಲೂ ಅವರು ಜನರಿಗೆ ‘ಇದನ್ನು ಮಾಡಿ’ ಎಂದು ಹೇಳುತ್ತಿದ್ದರೇ ಹೊರತು, ಏತಕ್ಕೆ ಮಾಡಬೇಕೆಂಬುದಾಗಿ ವಿವರಿಸುತ್ತಿರಲಿಲ್ಲ. ಈ ಮಾರ್ಗವೆಲ್ಲ ಹಾನಿಕರವಾಯಿತು. ಇದರಿಂದ ಜನರಿಗೆ ಗುರಿ ಸಾಧಿಸಲು ನೆರವಾಗುವ ಬದಲು ಅವರು ಕೆಲಸಕ್ಕೆ ಬಾರದ ಬೇಕಾದಷ್ಟು ಮೂಢನಂಬಿಕೆಗಳನ್ನು ಹೊರುವಂತೆ ಮಾಡಲಾಯಿತು. ಅವರು ಅದನ್ನು ವಿವರಿಸದೆ ಇದ್ದುದಕ್ಕೆ ಕಾರಣವೇನೆಂದರೆ, ಕೇಳುವವರು ಯೋಗ್ಯರಲ್ಲದೇ ಇದ್ದುದರಿಂದ, ಅರ್ಥವನ್ನು ವಿವರಿಸಿದರೂ ಅವರಿಗೆ ತಿಳಿದುಕೊಳ್ಳಲು ಆಗುತ್ತಿರಲಿಲ್ಲ ಎಂಬುದು. ಈ ಅಧಿಕಾರವಾದಕ್ಕೆ ಕಾರಣ ಬರಿಯ ಸ್ವಾರ್ಥ. ತಮಗೆ ತಿಳಿದುದನ್ನೆಲ್ಲ ಅವರಿಗೆ ತಿಳಿಸಿದರೆ ಬೋಧಕರ ಗೌರವಸ್ಥಾನಕ್ಕೆ ಎಲ್ಲಿ ಚ್ಯುತಿ ಬರುವುದೋ ಎಂದು ಅವರು ಅಂಜಿದ್ದರು. ಆದಕಾರಣವೇ ಅವರು ಅಧಿಕಾರವಾದಕ್ಕೆ ಬೆಂಬಲ ಕೊಡುತ್ತಿದ್ದರು. ಒಬ್ಬನು ಈ ವಿಷಯವನ್ನು ತಿಳಿದುಕೊಳ್ಳಲು ಸಮರ್ಥನಲ್ಲ ಎಂದು ನಾವು ಭಾವಿಸಿದರೆ, ಅವನಿಗೆ ತಿಳಿವನ್ನು ಕೊಡಲು ಹೆಚ್ಚು ಶ್ರಮವನ್ನು ತೆಗೆದುಕೊಂಡು, ಅವನ ಬುದ್ಧಿಯು ಅತಿ ಸೂಕ್ಷ್ಮ ವಿಷಯವನ್ನೂ ಅರ್ಥಮಾಡಿಕೊಳ್ಳುವಂತೆ ಮಾಡಬೇಕು. ಅಧಿಕಾರವಾದದ ಬೆಂಬಲಿಗರು ಮಾನವನಲ್ಲಿ ಅನಂತ ಸಾಧ್ಯತೆಗಳು ಸುಪ್ತವಾಗಿವೆ ಎಂಬುದನ್ನು ಗಮನಿಸಬೇಕು. ಪ್ರತಿಯೊಬ್ಬರಿಗೂ ಅವರವರ ಭಾಷೆಯಲ್ಲಿ ಹೇಳಿದರೆ ಅರ್ಥಮಾಡಿಕೊಳ್ಳಬಲ್ಲರು (ಕೃತಿಶ್ರೇಣಿ ೭ : ೨೯೩–೯೪).

ಸಾಕಷ್ಟು ತರಬೇತಿಯಿಲ್ಲದೆ, ಮನಸ್ಸು ಮುಕ್ತವಾಗದೆ ಉನ್ನತ ಚಿಂತನೆಗಳನ್ನು ಗ್ರಹಿಸಲಾಗುವುದಿಲ್ಲ ಎಂಬುದು ನಿಜ. ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗೆ ಎಂ.ಎ. ಪಾಠಗಳನ್ನು ಗ್ರಹಿಸಲಾಗುವುದಿಲ್ಲ. ಆದರೆ ಈ ರೀತಿಯ ಅಧಿಕಾರವನ್ನು ಪಡೆಯುವುದಕ್ಕೆ ಅವಕಾಶವನ್ನೇ ಕಲ್ಪಿಸದೆ, ಸಾವಿರಾರು ವರ್ಷಗಳಿಂದ ಸಮಾಜದ ಒಂದು ವರ್ಗದ ಜನರು ಹೀನಾಯ ಸ್ಥಿತಿಯಲ್ಲಿ ಇರುವಂತೆ ಮಾಡಿರುವುದು ತಪ್ಪು. ಇಂತಹ ಅಧಿಕಾರವಾದವನ್ನು ಸ್ವಾಮಿ ವಿವೇಕಾನಂದರು ಖಂಡಿಸಿದುದು ಯುಕ್ತವಾಗಿಯೇ ಇದೆ.

“ಜ್ಞಾನಿಯು ಶಿಸ್ತಿನಿಂದ ಕರ್ಮಗಳನ್ನು ಆಚರಿಸುತ್ತ ಅವರಿಂದಲೂ ಎಲ್ಲ ಕರ್ಮಗಳನ್ನೂ ಮಾಡಿಸಬೇಕು” (೩:೬) ಎಂಬ ಶ್ರೀಕೃಷ್ಣನ ನುಡಿಯೂ, ಜ್ಞಾನಿಯಾದವನು ಜನಸಾಮಾನ್ಯರ ಮಟ್ಟಕ್ಕೆ ಇಳಿದು ಅವರನ್ನು ಮೇಲೆತ್ತಬೇಕು ಎಂಬುದನ್ನು ಸೂಚಿಸುತ್ತದೆ.


***Statement about ownership and other particulars about Viveka Prabha (according to Form IV Rule 8, circulated by Registrar of Newspapers for India)***

| | | |
|---|---|---|
| 1. Place of Publication | : | **Mysore 570 020** |
| 2. Periodicity of Publication | : | **Monthly** |
| 3. Printer's Name | : | **Swami Muktidananda** |
| Nationality | : | **Indian** |
| Address | : | **President, Sri Ramakrishna Ashrama, Yadavagiri, Mysore 570 020** |
| 4. Publisher's Name | : | **Swami Muktidananda** |
| Nationality | : | **Indian** |
| Address | : | **President, Sri Ramakrishna Ashrama, Yadavagiri, Mysore 570 020** |
| 5. Editor's Name | : | **Swami Vireshananda** |
| Nationality | : | **Indian** |
| Address | : | **Sri Ramakrishna Ashrama Yadavagiri Mysore 570 020** |
| 6. Name & Addresses of the individuals who own the newspaper and partners or share-holders holding more than 1% of the capital | : | **President, Sri Ramakrishna Ashrama, Yadavagiri Mysore 570 020** |

**I, Swami Mukidananda, hereby declare that the particulars given above are true to the best of my knowledge and belief.**

*Sd.*

*Swami Muktidananda*

01.04.2013 Signature of the Publisher